# KANNADA

## Paper I

### ( LITERATURE )

*Time allowed : **Three** Hours*

*Maximum Marks : **250***

---

### Question Paper Specific Instructions

***Please read each of the following instructions carefully before attempting questions :***

*There are **EIGHT** questions divided in two **SECTIONS**.*

*Candidate has to attempt **FIVE** questions in all.*

*Questions no. **1** and **5** are compulsory and out of the remaining, **THREE** are to be attempted choosing at least **ONE** from each section.*

*The number of marks carried by a question/part is indicated against it.*

*Answers must be written in **KANNADA**.*

*Word limit in questions, wherever specified, should be adhered to.*

*Attempts of questions shall be counted in chronological order. Unless struck off, attempt of a question shall be counted even if attempted partly. Any page or portion of the page left blank in the answer book must be clearly struck off.*

---



Optional Province · optionalprovince.com

## SECTION A

**Q1.** ಕೆಳಗೆ ನೀಡಿರುವ ವಿಷಯಗಳನ್ನು ಕುರಿತು ಟಿಪ್ಪಣಿ ಬರೆಯಿರಿ (ಒಂದೊಂದೂ 150 ಶಬ್ದಗಳಿಗೆ ಮೀರದಂತೆ ಇರಬೇಕು. ಪ್ರತಿ ಉಪಪ್ರಶ್ನೆಗೂ 10 ಅಂಕಗಳು) : *10×5=50*

(a) ಕನ್ನಡಭಾಷೆಯ ಚಾರಿತ್ರಿಕ ಬೆಳವಣಿಗೆಯಲ್ಲಿ ಕಂಡುಬರುವ ಧ್ವನಿಬದಲಾವಣೆಗಳು. *10*

(b) ನಾಗಚಂದ್ರನ ರಾವಣನ ಪಾತ್ರದ ಸಂಕೀರ್ಣತೆ. *10*

(c) ಬಸವಣ್ಣನವರ ವಚನಗಳಲ್ಲಿ ಲೋಕಾನುಭವ. *10*

(d) ನವೋದಯ ಕಾವ್ಯದಲ್ಲಿ ಪ್ರಕೃತಿ. *10*

(e) ಕನಕದಾಸರು 'ಕುಲ'ವನ್ನು ಕುರಿತಂತೆ ಮಾಡಿರುವ ಟೀಕೆ. *10*

**Q2.** (a) ಮಧ್ಯಕಾಲೀನ ಕನ್ನಡ ಸಾಹಿತ್ಯವನ್ನು ರೂಪುಗೊಳಿಸಿದ ಧಾರ್ಮಿಕ ನೆಲೆಗಳನ್ನು ಪರಿಚಯ ಮಾಡಿಕೊಡಿ. *25*

(b) ಆಧುನಿಕ ಕನ್ನಡ ಸಾಹಿತ್ಯ 'ಪಾಶ್ಚಾತ್ಯ ಪ್ರಭಾವ' 'ರಾಷ್ಟ್ರೀಯತೆ' ಹಾಗೂ 'ಕನ್ನಡದ ಪ್ರಾದೇಶಿಕತೆ'ಗಳ ಸಂದರ್ಭದಲ್ಲಿ ರೂಪುಗೊಂಡಿದೆ – ಚರ್ಚಿಸಿ. *25*

**Q3.** (a) ಪಂಪನ 'ವಿಕ್ರಮಾರ್ಜುನವಿಜಯ' ಹಾಗೂ ನಾಗಚಂದ್ರನ 'ರಾಮಚಂದ್ರಚರಿತಪುರಾಣಂ' ಜೈನಕವಿಗಳ ಭಾರತ ಮತ್ತು ರಾಮಾಯಣಗಳಾದರೂ ಅವು ಭಿನ್ನವಾಗಿ ನಿರ್ವಹಣೆಯಾಗಿರುವ ರೀತಿಯನ್ನು ಕುರಿತು ಚರ್ಚಿಸಿ. *25*

(b) ರಾಘವಾಂಕನ 'ಹರಿಶ್ಚಂದ್ರಕಾವ್ಯ' ದಲ್ಲಿ ಬಂದಿರುವ 'ಹೊಲೆತಿಯರ ಪ್ರಸಂಗ'ದ ಪ್ರಾಮುಖ್ಯತೆಯನ್ನು ಪರಿಚಯಮಾಡಿಕೊಡಿ. *25*

**Q4.** (a) ಸ್ತ್ರೀವಾದಿ ಕಾವ್ಯದ ಪ್ರಮುಖ ನೆಲೆಗಳನ್ನು ಕುರಿತು ಚರ್ಚಿಸಿ. *25*

(b) ನವೋದಯ ಹಾಗೂ ನವ್ಯ ಕಾವ್ಯಗಳ ತಾತ್ವಿಕ ನೆಲೆಗಳನ್ನು ತೌಲನಿಕವಾಗಿ ವಿವೇಚಿಸಿ. *25*



Optional Province · optionalprovince.com

## SECTION B

**Q5.** ಕೆಳಗೆ ನೀಡಿರುವ ವಿಷಯಗಳನ್ನು ಕುರಿತು ಟಿಪ್ಪಣಿ ಬರೆಯಿರಿ (ಪ್ರತಿ ಟಿಪ್ಪಣಿ 150 ಶಬ್ದಗಳಿಗೆ ಮೀರದಂತೆ ಇರಬೇಕು. ಪ್ರತಿ ಉಪಪ್ರಶ್ನೆಗೂ 10 ಅಂಕಗಳು) : *10×5=50*

(a) ಅಲಂಕಾರಗಳು *10*

(b) ರೂಪನಿಷ್ಟ ವಿಮರ್ಶೆ *10*

(c) ಚಾಲುಕ್ಯರು ಮತ್ತು ಐಹೊಳೆ – ಬಾದಾಮಿ – ಪಟ್ಟದಕಲ್ಲಿನ ವಾಸ್ತುಶಿಲ್ಪ *10*

(d) ವಿಜಯನಗರ ಚಿತ್ರಕಲೆ *10*

(e) ಕರ್ನಾಟಕ ಏಕೀಕರಣ ಚಳುವಳಿಯಲ್ಲಿ ಆಲೂರು ವೆಂಕಟರಾವ್ ಪಾತ್ರ. *10*

**Q6.** (a) ಭರತನ ರಸಸಿದ್ಧಾಂತವನ್ನು ವಿವರಿಸಿ ಅದರ ಬಗ್ಗೆ ನಡೆದಿರುವ ಚರ್ಚೆಯನ್ನು ಪರಿಚಯ ಮಾಡಿಕೊಡಿ. *25*

(b) ಭಟ್ಟತೌತನ 'ಪ್ರತಿಭೆ'ಯ ನಿರ್ವಚನವನ್ನು ನೀಡಿ ಅದರ ಪ್ರಾಮುಖ್ಯತೆಯನ್ನು ಕುರಿತು ಚರ್ಚಿಸಿ. *25*

**Q7.** (a) 'ಜಾತಿವಿನಾಶ' ಕನ್ನಡಸಾಹಿತ್ಯದ ಚರಿತ್ರೆಯುದ್ದಕ್ಕೂ ಕಂಡುಬರುವ ಒಂದು ಪ್ರಮುಖ ವೈಚಾರಿಕ ನೆಲೆ – ಚರ್ಚಿಸಿ. *25*

(b) ಸ್ತ್ರೀವಚನಕಾರ್ತಿಯರ ವಚನಗಳ ವಿಶಿಷ್ಟತೆಯನ್ನು ಪರಿಚಯ ಮಾಡಿಕೊಡಿ. *25*

**Q8.** (a) ನವೋದಯ ವಿಮರ್ಶೆಯ ಪ್ರಮುಖ ನೆಲೆಗಳನ್ನು ಗುರುತಿಸಿ. *25*

(b) ದಲಿತ–ಬಂಡಾಯ ವಿಮರ್ಶೆಯ ಸಾಮಾಜಿಕ ಆಯಾಮಗಳನ್ನು ಕುರಿತು ಚರ್ಚಿಸಿ. *25*



Optional Province · optionalprovince.com